



ಅರುಣ ಪಿ. ಭಟ್ಟ

## ವಾರಭವಿಷ್ಯ: 25.12.2025ರಿಂದ 31.12.2025ರವರೆಗೆ




ಹೊಸ ಕೆಲಸಗಳಿಗೆ ಪ್ರಯತ್ನಿಸಲು ಸೂಕ್ತ ಕಾಲ. ಉದ್ಯೋಗದಲ್ಲಿ ಅದ್ಭುತ ಯಶಸ್ಸು. ಭದ್ರತೆ ಮತ್ತು ತಂತ್ರಜ್ಞಾನದಂಥ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಗ್ರಹಗತಿಗಳು ಅನುಕೂಲಕರವಾಗಿವೆ. ಹೊಸ ಕೆಲಸಕ್ಕಾಗಿ ತೆರಳಿದರೆ ಸಕಾರಾತ್ಮಕ ಫಲಿತಾಂಶ ದೊರೆಯುವ ಸಾಧ್ಯತೆ ಇದೆ. ಶ್ರಮದ ಕೆಲಸಗಳಿಂದ ಸಾರ್ಥಕತೆಯ ಭಾವನೆ ಕಾಣಬಹುದು. ಶುಭದಿನ: 28. ಗೋಪೂಜೆ ಮಾಡಿರಿ. ಉಮಾಮಹೇಶ್ವರ ಪ್ರಾರ್ಥನೆ ಮಾಡಿರಿ.




ನೀವು ಮಾಡುವ ಕೆಲಸದಲ್ಲಿ ಉತ್ತಮ ಫಲಿತಾಂಶ ಸಿಗಲಿದೆ. ಇನ್ನೊಬ್ಬರಿಗೆ ಬುದ್ಧಿವಾದ ಹೇಳುವ ಮೊದಲು ವ್ಯಕ್ತಿ ಕೇಳುಗನಾಗಿದ್ದಾನೆಯೇ ಎಂಬುದನ್ನು ಅರಿತುಕೊಳ್ಳಿ. ಆದಾಯ ಹೆಚ್ಚಳಕ್ಕೆ ಅವಕಾಶ ಇದೆ. ಕುಟುಂಬದಲ್ಲಿ ಸಂತೋಷವಾಗಿ ಇರುವುದರಿಂದ ನಿಮ್ಮ ಮನಸು ಕೂಡ ಸಮಾಧಾನವಾಗಿ ಇರುತ್ತದೆ. ಯಶಸ್ಸು ನಿಮ್ಮ ಮನೆಯ ಬಾಗಿಲು ಬಡಿಯುತ್ತದೆ. ಶುಭದಿನ: 30. ಹನುಮಾನ್ ಚಾಲೀಸ್ ಪಠಿಸಿರಿ.




ಗ್ರಹಗತಿಗಳು ನಿಮಗೆ ಅನುಕೂಲಕರವಾಗಿವೆ. ಅತಿ ಮುಖ್ಯವಾದ ಕೆಲಸಗಳನ್ನು ಮಾಡಿಕೊಂಡುಬಿಡಿ. ನಿಮ್ಮಲ್ಲಿನ ಜಡತ್ವ ಕರಗಿ ಹೋಗಲಿದೆ. ನಿಮ್ಮ ವಿನಯದ ಸ್ವಭಾವದಿಂದ ಹೆಚ್ಚಿನ ಹೆಸರು ಸಂಪಾದಿಸಲಿದ್ದೀರಿ. ಸಂಗಾತಿಯ ಬಯಕೆಗಳಿಗೆ ನೀವು ಸಮ್ಮತಿಯ ವಾಗ್ದಾನ ನೀಡಲಿದ್ದೀರಿ. ಮಕ್ಕಳ ವರ್ತನೆ ಬೇಸರ ತರಿಸಲಿದೆ. ಗೌರವ ಹೆಚ್ಚುವ ಸಾಧ್ಯತೆ ಇದೆ. ಶುಭದಿನ: 28. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ಮಾಡುವ ಕಾರ್ಯದಲ್ಲಿ ಅನಗತ್ಯ ತೊಂದರೆ ಬರಬಹುದು. ಕೆಲವು ಕಾರ್ಯಗಳನ್ನು ನೀವೇ ನಿಂತು ಮಾಡುವುದು ಒಳಿತು. ಕಾನೂನು ವ್ಯಾಜ್ಯಗಳ ಸಮತೋಲನ ಕಾಯ್ದುಕೊಳ್ಳಲು ಪ್ರಯತ್ನ ಮಾಡುತ್ತೀರಿ. ಹೂಡಿಕೆ, ಸಂಪತ್ತು ವಿಸ್ತರಣೆ ವ್ಯವಹಾರದಲ್ಲಿ ನೀವಂದುಕೊಂಡಂಥ ಫಲಿತಾಂಶ ದೊರೆಯಲಿದೆ. ಸಾಲ ಮರುಪಾವತಿಯಲ್ಲಿ ಸಮಸ್ಯೆ ಎದುರಾಗಬಹುದು. ಶುಭದಿನ: 29. ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ವಿವೇಚನಾರಹಿತ ಹೂಡಿಕೆಗಳಿಂದ ಧನ ನಷ್ಟ ಆಗುವ ಸಂಭವ. ನಿಮ್ಮದೇ ವಿಚಾರಗಳು ನಡೆಯಬೇಕೆಂಬ ವಾದ ಅತಿಶಯೋಕ್ತಿಯಾಗಿ ಕಾಣಬಹುದು. ಎಲ್ಲರ ಮಾತಿಗೆ ಪ್ರಾಧಾನ್ಯತೆ ನೀಡಿ ಮುನ್ನಡೆಯಿರಿ. ನಿಮ್ಮಲ್ಲಿ ಹೊಳೆಯುವ ಆಲೋಚನೆ ಉತ್ತಮ ಪರಿಕಲ್ಪನೆ. ಮನೆಯಲ್ಲಿ ಶುಭ ಕಾರ್ಯ ಆಯೋಜಿಸುವ ಸಾಧ್ಯತೆ ಇದೆ. ಶುಭದಿನ: 31. ವಿಷ್ಣು ಸಹಸ್ರನಾಮ ಓದಿರಿ.




ಕೆಲಸದಲ್ಲಿ ಆಗುವ ವಿಳಂಬದಿಂದ ನಿಮ್ಮ ಬಗ್ಗೆ ಹಲವು ಮಾತು ಬರಬಹುದು. ಅತಿಯಾದ ಆಸಕ್ತಿ ತೋರಿಸುವುದು ಒಳ್ಳೆಯದಲ್ಲ. ವ್ಯವಹಾರ ವಿಸ್ತರಣೆಗೆ ಆಲೋಚನೆ ಮಾಡುತ್ತೀರಿ. ಹಣಕಾಸು ಹೂಡಿಕೆ, ವಿದೇಶ ವ್ಯವಹಾರಕ್ಕೆ ಸಂಬಂಧಿಸಿದಂತೆ ನಿಮಗೆ ಅನುಕೂಲ ಆಗಲಿದೆ. ಕಾನೂನು ಕಟ್ಟಲೆಗಳು ನಡೆಯುತ್ತಿದ್ದಲ್ಲಿ ನಿಮ್ಮ ಪರವಾಗಿ ವಾದ ಬಲಗೊಳ್ಳಲಿದೆ. ಶುಭದಿನ: 26. ನವದುರ್ಗಾ ಆರಾಧನೆ ಮಾಡಿರಿ.




ಹಿರಿಯರ ಬಗ್ಗೆ ಗೌರವ ನೀಡುವುದು ಒಳ್ಳೆಯದು. ಉತ್ತಮ ಗಳಿಕೆ ಇದ್ದರೂ ದುಡುಕುತನ ದೊಡ್ಡ ಪೆಟ್ಟನ್ನು ನೀಡಬಹುದಾಗಿದೆ. ಮನಸ್ಸು ಮರ್ಕಟವಿದ್ದಂತೆ, ನಿಯಂತ್ರಣ ಮಾಡುವುದು ಒಳ್ಳೆಯದು. ಅದೃಷ್ಟ ನಿಮ್ಮ ಪಾಲಿಗೆ ಹುಡುಕಿಕೊಂಡು ಬರಲಿದೆ. ಇನ್ನು ಮ್ಯಾನೇಜ್‌ಮೆಂಟ್, ವಾಣಿಜ್ಯ, ಸ್ಪರ್ಧಾತ್ಮಕ ಕ್ಷೇತ್ರದಲ್ಲೂ ಯಶಸ್ಸು ದೊರೆಯಲಿದೆ. ಶುಭದಿನ: 27. ಆದಿತ್ಯ ಹೃದಯ ಪಠಿಸಿರಿ.




ಆರ್ಥಿಕವಾಗಿ ಬೆಳವಣಿಗೆ ಸಾಧಿಸುವಿರಿ. ರಾಜಿ ಪಂಚಾಯಿತಿಗಳಲ್ಲಿ ಹೋಗದಿರುವುದು ಸೂಕ್ತ. ಸುಖಾಸುಮ್ಮನೆ ಕದನಕ್ಕೆ ಬರುವ ಜನ ಕಂಡುಬರುತ್ತಾರೆ. ನಿಮ್ಮ ಸಾಮರ್ಥ್ಯಕ್ಕೆ ಇತರರು ಬೆರಗಾಗುತ್ತಾರೆ. ಸಾರ್ವಜನಿಕ ಮನ್ನಣೆ ದೊರೆಯುವ ಅವಕಾಶಗಳು ನಿಚ್ಚಳವಾಗಿವೆ. ಹೊಸ ಕೆಲಸಕ್ಕೆ ಪ್ರಯತ್ನ ಮಾಡುತ್ತಿರುವವರು ಶ್ರಮವನ್ನು ಹೆಚ್ಚಿಸಬೇಕು. ಶುಭದಿನ: 29. ಲಕ್ಷ್ಮೀನರಸಿಂಹ ಸ್ತೋತ್ರ ಪಠಿಸಿರಿ.




ಗ್ರಹಗತಿಗಳು ನಿಮ್ಮ ಕಡೆಗೆ ಶುಭ ದೃಷ್ಟಿ ಬೀರುತ್ತಿವೆ. ನಿಮ್ಮ ಹಲವು ತೊಂದರೆಗಳಿಗೆ ಪರಿಹಾರ ಸಿಗಲಿದೆ. ವೈಯಕ್ತಿಕ ಸಂಗತಿಗಳಲ್ಲಿ ನಿಮ್ಮ ಪಾಲಿಗೆ ಯಶಸ್ಸು ದೊರೆಯಲಿದೆ. ಮುಖ್ಯವಾದ ಚರ್ಚೆ ಕೂಡ ನಡೆಸುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ಹೆಚ್ಚು ಸಂತೋಷದಿಂದ ಕಾಣಿಸಿಕೊಳ್ಳುತ್ತೀರಿ. ಸಂಬಂಧಿಕರ ಜತೆಗೆ ಸೌಹಾರ್ದಯುತವಾದ ಬಾಂಧವ್ಯ ಇರುತ್ತದೆ. ಶುಭದಿನ: 30. ಸುಬ್ರಹ್ಮಣ್ಯ ಸ್ವಾಮಿಗೆ ಕ್ಷೀರಾಭಿಷೇಕ ಮಾಡಿರಿ.




ಹೊಸ ಯೋಜನೆಗೆ ಸಿದ್ಧತೆ ನಡೆಸುವುದು ಒಳ್ಳೆಯದು. ಪಶುಸಂಗೋಪನೆ, ಕೃಷಿ ಚಟುವಟಿಕೆಗಳಲ್ಲಿ ಉತ್ತಮ ಬೆಳವಣಿಗೆ ಇದೆ. ಭೂಮಿಯ ವಿಷಯದಲ್ಲಿ ಉತ್ತಮ ವ್ಯವಹಾರ ನಡೆಸುವ ಸಾಧ್ಯತೆ ಕಂಡುಬರುತ್ತದೆ. ವಿದೇಶ ಪ್ರಯಾಣ ಮಾಡುವ ಸಾಧ್ಯತೆ ಇದೆ. ಕಾನೂನು ವ್ಯವಹಾರಗಳು ಈ ಅವಧಿಯಲ್ಲಿ ನಿಮಗೆ ಅನುಕೂಲಕರವಾಗಿವೆ. ಶುಭದಿನ: 28. ಕಾಲಭೈರವನ ಸೇವೆ ಮಾಡಿರಿ.




ಸೋಲಿನಿಂದ ಗೆಲುವಿನ ಕಡೆಗೆ ಪ್ರಯಾಣ ಬೆಳೆಸುವಿರಿ. ಕುಟುಂಬದಲ್ಲಿ ಸಂಕಷ್ಟ ಎದುರಾಗಬಹುದು. ದೃಢಮನಸ್ಸಿನಿಂದ ಕಾರ್ಯಗಳಲ್ಲಿ ಸಫಲರಾಗುವಿರಿ. ಸಮಸ್ಯೆಗಳ ಸುಳಿಯಿಂದ ಹೊರಬರಲು ಪ್ರಯತ್ನ ಮೆಚ್ಚುವಂಥದ್ದು. ಮನೆಗೆ ನೆಂಟರಿಷ್ಟರ ಆಗಮನ ಸಾಧ್ಯತೆ. ಹೊಸದಾಗಿ ಕೆಲಸಕ್ಕಾಗಿ ಪ್ರಯತ್ನ ಮಾಡುತ್ತಿರುವವರು ಶ್ರಮವನ್ನು ಮುಂದುವರಿಸಬೇಕು. ಶುಭದಿನ: 27. ಶನಿಸ್ತೋತ್ರ ಪಠಿಸಿರಿ.




ಕೌಟುಂಬಿಕ ಸಮಸ್ಯೆಗಳು ಸರಿಹೋಗಲಿವೆ. ಉದ್ಯೋಗದ ಸ್ಥಿತಿಗತಿ ಚೇತರಿಕೆಯತ್ತ ಸಾಗುತ್ತದೆ. ಉದ್ಯೋಗದಲ್ಲಿ ಪ್ರಗತಿ ಸಾಧ್ಯತೆ. ಯಶಸ್ವಿದಾಯಕ ನಿರ್ಣಯಗಳಿಂದ ಸ್ಥಾನ ಗಟ್ಟಿಗೊಳಿಸಿಕೊಳ್ಳುವಿರಿ. ಮಾನಸಿಕ ದೃಢತೆ ಹೆಚ್ಚಲಿದೆ. ನಿಮ್ಮ ವಿರೋಧಿಗಳನ್ನು ಈ ಅವಧಿಯಲ್ಲಿ ಮಣಿಸುತ್ತೀರಿ. ಹಣಕಾಸು ಹೂಡಿಕೆ ಲಾಭದಾಯಕವಾಗಿ ಇರುತ್ತದೆ. ಶುಭದಿನ: 26. ಗಣಪತಿಗೆ ದೂರ್ವಾರ್ಚನೆ ಮಾಡಿರಿ.